ಆ) ೧೯೬೬-೬೭ರಲ್ಲಿ ದುರಸ್ತಿಗಾಗಿ ಹಾಗೂ ಡಾಂಬರು ಮಾಡಲು ಖರ್ಚು ಮಾಡಿರುವ ಹಣದ ವಿವರ ಈ ಕೆಳಗಿನಂತಿದೆ :

	ಏಪ್ರಿಲ್ ೬೬	ಮೇ ೬೬	ಜೂನ್ ೬೬	ಜುಲೈ ೬೬	ಒಟ್ಟು
೫೩೭–ಬಿ.ಆರ್. ಮತ್ತು ಎಸ್.ಆರ್.	೩೦೫೫	೭೩೮೯	೨೧೭೨೨	೧೯೪೪೫	೫೨೦೫೧
೫೩೭–ಸಿ.ಒ–ಆರ್ ಆಂಡ್ ಬಿ–ಅಸ್ಸಾಲ್ಟ್‌ಂಟ್	—	೫೭೬೫೦	೨೨೬೪೧	. .	೬೦೨೯೧
ಒಟ್ಟು	೩೦೯೫	೪೫೦೩೯	೪೪೬೭೬	೧೯೪೪೫	೧೧೨೬೪೨

(೫) ಮತ್ತು (ಈ) : ಈ ರಸ್ತೆಯ ಉಳಿದ ಭಾಗ ೧೦.೯೦ ಕಿ.ಮೀ.ಗೆ ಡಾಂಬರು ಮಾಡಲು ತಗಲುವ ಅಂದಾಜು ವೆಚ್ಚ ೧೨ ಲಕ್ಷ ರೂಪಾಯಿಗಳು. ಇದನ್ನು ಆರ್ಥಿಕ ಲಭ್ಯತೆಯನ್ನಾಧರಿಸಿ ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

ಬರಗಾಲ ಕಾಮಗಾರಿಯಲ್ಲಿ ಹರಪನಹಳ್ಳಿ ತಾಲ್ಲೂಕ್‌ನಲ್ಲಿ ಕೆರೆಗಳ ದುರಸ್ತಿ ಬಗ್ಗೆ

೧೬೪ (೩೬೦) ಶ್ರೀ ಬಿ.ಹೆಚ್. ಯಂಕಾನಾಯ್ಕ (ಹರಪನ ಹಳ್ಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ :—

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲ್ಲೂಕ್‌ನಲ್ಲಿ ಬರಗಾಲದ ಕಾಮಗಾರಿಯ ಮೇರೆಗೆ ಎಷ್ಟು ಕೆರೆಗಳನ್ನು ದುರಸ್ತಿ ಮಾಡಲಾಗಿದೆ, ಹಾಗೂ ಮಾಡಬೇಕಾದವು ಯಾವುವು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—೨೧ ಕೆರೆಗಳನ್ನು ದುರಸ್ತಿ ಮಾಡಲಾಗಿದೆ. ಇನ್ನೂ ಮಾಡಬೇಕಾದವು ಯಾವುವೂ ಇಲ್ಲ.

ಬಿಜಾಪುರ ಜಿಲ್ಲೆಯಲ್ಲಿ ಖಾಸಗೀ ತಾಂತ್ರಿಕ ವಿದ್ಯಾಲಯ ಆರಂಭಿಸುವ ಬಗ್ಗೆ

೧೬೫ (೧೨) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ವಿಜಾಪುರ ಜಿಲ್ಲೆಯಲ್ಲಿ ಖಾಸಗೀ ತಾಂತ್ರಿಕ ವಿದ್ಯಾಲಯಗಳನ್ನು ಆರಂಭಿಸುವಂತೆ ಅನುಮತಿ ಕೋರಿ ಬಂದ ಅರ್ಜಿಗಳು ಎಷ್ಟು?

(ಆ) ಈ ಸಲ ಎಷ್ಟು ಖಾಸಗಿ ಸಂಸ್ಥೆಗಳಿಗೆ ತಾಂತ್ರಿಕ ಶಾಲೆಗಳನ್ನು ಆರಂಭಿಸಲು ಅನುಮತಿ ಕೊಡಲಾಗಿದೆ (ತಾಲ್ಲೂಕುವಾರು ಮಾಹಿತಿ ಒದಗಿಸುವುದು)?

(೫) ಈ ರೀತಿ ಅನುಮತಿ ಕೊಡುವಾಗ ತಾರತಮ್ಯ ನಡೆದಿರುವುದು ನಿಜವೆ?

(ಈ) ಹಾಗಿದ್ದಲ್ಲಿ ಅದನ್ನು ಸರಿಪಡಿಸಲು ಕೈಗೊಂಡ ಕ್ರಮವೇನು?

ಶ್ರೀ ಡಿ. ಮಂಜುನಾಥ್ (ವಿದ್ಯಾ ಸಚಿವರು).—

(ಅ) ೭.

(ಆ) ೧೯೬೬-೬೭ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಗೆ ೩ ಪಾಲಿಟೆಕ್ನಿಕ್‌ಗಳನ್ನು ಮಂಜೂರು ಮಾಡಲಾಗಿದೆ ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ :—

೧. ಬಾದಾಮಿ	೧
೨. ಬಾಗಲಕೋಟೆ	೧
೩. ಬಿಜಾಪುರ	೧

(೫) ಇಲ್ಲ.

(ಈ) ಉದ್ಭವಿಸಂಪುದಿಲ್ಲ.